‘ಅದರ ತಿಳಿವು ನನಗಿಲ್ಲ’.

‘ಇರಲಿ, ಇನ್ನು ಪವಾಡ, ದೈವೀಶಕ್ತಿ ಇತ್ಯಾದಿ ನಿಜವೇ?’

‘ಈ ಬಗ್ಗೆ ನಾನೆಲ್ಲೂ ಮಾತನಾಡಿಲ್ಲ. ನಾನೂ ಪ್ರಯೋಗ ಮಾಡುವುದಿಲ್ಲ’.

‘ಇದೇನಿದು. ಇಂಥ ಗಹನವಾದ ಪ್ರಶ್ನೆಗಳಿಗೆಲ್ಲ ನಿನ್ನಲ್ಲಿ ಉತ್ತರವೇ ಇಲ್ಲವಲ್ಲ! ಅಂದ ಮೇಲೆ ನಿನಗೆ ಜ್ಞಾನೋದಯವಾಗಿರುವುದೆಂತು? ಬುದ್ಧನಾಗಿರುವೆಯೆಂದು ಜನರು ನಂಬುವುದಾದರೂ ಹೇಗೆ?’

‘ಅದು ಅವರವರ ನಂಬಿಕೆ.’

‘ಹಾಗಾದರೆ ನೀನು ನನ್ನ ಪ್ರಜೆಗಳನ್ನೆಲ್ಲಾ ನಂಬಿಸಿ ಮೋಸ ಮಾಡುತ್ತಿರುವೆ, ದ್ರೋಹ ಎಸಗುತ್ತಿರುವೆಯಲ್ಲವೇ?’

‘ಅಲ್ಲ ದೊರೆಯೇ... ಗಂಗಾನದಿಯ ತಟದಲ್ಲಿರುವ ಮರಳಿನ ಕಣಗಳೆಷ್ಟು? ಸಾಗರದ ಆಳ, ಅಗಲ, ನೀರಿನ ಪ್ರಮಾಣ ಎಷ್ಟು?’

‘ಅದು ಹೇಗೆ ಎಣಿಸಲು ಸಾಧ್ಯ? ಅದು ಊಹೆಗೆ ನಿಲುಕದ್ದು...’

‘ಇದೂ ಹಾಗೆಯೇ! ಅನುಭವಕ್ಕೆ ಮೀರಿದವುಗಳನ್ನು ನಂಬುವುದು ಹೇಗೆ? ಹಿಂದಿನ ಜನ್ಮ, ಮುಂದಿನ ಜನ್ಮಗಳ ಬಗ್ಗೆ ಚಿಂತಿಸುವ ಬದಲು ನಾವು ವರ್ತಮಾನದಲ್ಲಿ ಬದುಕುತ್ತಿರುವ ಈ ಜನ್ಮವನ್ನು ನೈತಿಕವಾಗಿ ಬಾಳಿ ಬದುಕಿ ತೋರಿಸಬೇಕಲ್ಲವೇ? ಅದೇ ಅಲ್ಲವೇ ಸಾಕ್ಷಾತ್ಕಾರ. ಇಹದ ಚಿಂತೆ ಬಿಟ್ಟು ಪರದ ಚಿಂತೆ ಯಾಕೆ? ಇದೇ ನನ್ನ ಧರ್ಮದ ತಿರುಳು’ ಎಂದ.

‘ಇದು ಭಂಡತನದ ಪರಮಾವಧಿಯಲ್ಲವೇ? ಇಲ್ಲಿ ಕಾಣುವುದು, ಅನುಭವಿಸುವುದಷ್ಟೇ ಸತ್ಯ ಹೇಗಾದೀತು? ಧರ್ಮ ಹೇಗಾದೀತು? ಎಲ್ಲರೂ ಈ ಜನ್ಮದ ಮೋಕ್ಷದ ಸಾಕ್ಷಾತ್ಕಾರಕ್ಕಾಗಿ ಮುಂದಿನ ಜನ್ಮದ ಉನ್ನತಿಗಾಗಿ ನೈತಿಕತೆಯಿಂದ, ಭಯ ಭಕ್ತಿಯಿಂದ ಬದುಕುತ್ತಿದ್ದಾರೆ. ಆದರೆ ಈತ ಅದ್ಯಾವುದೂ ಇಲ್ಲ ಎನ್ನುತ್ತಿದ್ದಾನೆ. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರರೆಂಬ ಜಾತಿ ಶ್ರೇಣಿಗಳೆಲ್ಲ ಸುಳ್ಳು ಎನ್ನುತ್ತಿದ್ದಾನೆ. ತನ್ನ ಸಂಘ ಬಲಾಢ್ಯವಾಗಿದೆ, ತನ್ನ ಹಿಂಬಾಲಕರು ಸಾಕಷ್ಟಿದ್ದಾರೆ ಎಂದು ತೋರಿಸಲು ಶೂದ್ರರನ್ನೆಲ್ಲ ತನ್ನ ಸಂಘಕ್ಕೆ ಸೇರಿಸಿಕೊಂಡಿದ್ದಾನೆ. ಮೊದಮೊದಲು ಸ್ತ್ರೀಯರಿಗೆ ತನ್ನ ಸಂಘದಲ್ಲಿ ಪ್ರವೇಶವಿಲ್ಲ ಎಂದಿದ್ದವನು, ಕ್ರಮೇಣ ಸ್ತ್ರೀಯರು ಸಮಣರಾಗಿಯಲ್ಲ, ಉಪಾಸಕರಾಗಿ ಬರಬಹುದು ಎಂದು ಹೇಳುತ್ತಿದ್ದಾನೆ. ಹಾಗಾದರೆ ಇದು ಉಚ್ಛಧರ್ಮ ಹೇಗಾದೀತು, ನೀಚಧರ್ಮ ತಾನೇ?’ ಎಂದು ನಾನು ಪಸೇನದಿಯ ಮುಂದೆ ವಾದಿಸಿದೆ.

ಗೆಳೆಯನೂ ಆಗಿದ್ದ ಪಸೇನದಿಗೆ ಹೇಳಿದೆ: ‘ಇದೆಂಥದು ಬುದ್ಧನದು ದ್ವಂದ್ವನೀತಿ? ಯಾವುದೇ ಪ್ರಾಣಿಪಕ್ಷಿಗಳನ್ನು ಕೊಲ್ಲಬಾರದಂತೆ. ಕೊಂದು ಅಡುಗೆ ಮಾಡಿ ತಿನ್ನಬಾರದಂತೆ. ಆದರೆ ಯಾರಾದರೂ ಮಾಂಸಾಹಾರವನ್ನು ಭಿಕ್ಷೆಯಾಗಿ ನೀಡಿದರೆ ಮಾತ್ರ ತಿನ್ನಬಹುದಂತೆ!? ಅದೂ ಹಿಂಸೆಗೆ ಪ್ರಚೋದಿಸಿದಂತೆಯೇ ಅಲ್ಲವೇ?’ ಎಂದು ಹೇಳಿ ಕಪಿಲವಸ್ತುವಿನಲ್ಲಿ ಬಾಲಕನಿದ್ದಾಗ ನಾನು ಹೊಡೆದ ಹಂಸವನ್ನು ಎತ್ತಿಕೊಂಡು ಹೋಗಿ ಉಪಚರಿಸಿದ್ದ ಕಥೆ ಹೇಳಿದೆ. ಬೇಟೆ ಯಾವತ್ತೂ ಬೇಟೆಯಾಡಿದವನ ವಸ್ತು ತಾನೇ? ಎಂದು ನ್ಯಾಯ ಕೇಳಿದೆ. ಆದರೆ ಅದೇಕೋ ಎಷ್ಟೇ ಪ್ರಯತ್ನಿಸಿದರೂ ಗೌತಮನ ಮುಂದೆ, ಅವನ ಮಂದಸ್ಮಿತ ನಗುವಿನ ಮುಂದೆ, ಅವನಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರವಿಲ್ಲದಿದ್ದರೂ ನಿರಾಕರಿಸಲು ಸಾಧ್ಯವಿಲ್ಲ ಎಂದುಬಿಟ್ಟನಲ್ಲ ಪಸೇನದಿ!

ಅದೇನು ಮೋಡಿ ಮಾಡಿದ್ದಾನೆ ಸಿದ್ಧಾರ್ಥ? ದಿನೇ ದಿನೇ ಅವನ ಹಿಂಬಾಲಕರ ಸಂಖ್ಯೆ ಅಧಿಕವಾಗುತ್ತಲೇ ಇದೆ. ವಿಶೇಷವಾಗಿ ಅಧಿಕ ಸಂಖ್ಯೆಯಲ್ಲಿರುವ ಕೆಳವರ್ಗ, ಶ್ರಮವರ್ಗದವರೆಲ್ಲ ಆಕರ್ಷಿತರಾಗುತ್ತಿದ್ದಾರೆ. ಹೀಗೇ ಆದರೆ ಮುಂದೊಂದು ದಿನ ಆತನ ವರ್ಚಸ್ಸು ವೃದ್ಧಿಗೊಳ್ಳಬಹುದೆಂಬ ಆತಂಕ ಎದುರಾಯಿತು. ಅವನು ಕೋಸಲವನ್ನು ಬಿಟ್ಟು ತೆರಳುವ ಮುನ್ನವೇ ಕೊಂದುಬಿಡಬೇಕೆಂದು ಅನ್ನಿಸಲಾರಂಭಿಸಿತು.

ಕೋಸಲದ ಆನೆ ಲಾಯದ ಅತಿ ತುಂಟ ಆನೆಗೆ ಮದ್ಯ ಕುಡಿಸಲಾಯಿತು. ಬುದ್ಧನ ಅನುಯಾಯಿಗಳು ತಮ್ಮ ಬುದ್ಧನಿಗೆ ಶರಣು, ತಮ್ಮ ಧರ್ಮಕ್ಕೆ ಶರಣು, ತಮ್ಮ ಸಂಘಕ್ಕೆ ಶರಣು ಎಂದು ತಮ್ಮ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವ ಘೋಷಣೆಗಳನ್ನು ಕೂಗುತ್ತಾ, ನಡುಬೀದಿಯಲ್ಲಿ ನಡೆಯುತ್ತಿರುವಾಗ ಆ ಮತ್ತೇರಿದ್ದ ಆನೆಯನ್ನು ನಡುಬೀದಿಯಲ್ಲಿ ಬಿಡಲಾಯಿತು. ಮಾವುತನಿಗೆ ಅದರ ಆಯಕಟ್ಟಿನ ಜಾಗಕ್ಕೆ ಅಂಕುಶದಿಂದ ತಿವಿದು ಗಾಸಿಗೊಳಿಸುವಂತೆ ಹೇಳಿದ್ದೆ. ನಲಾಗಿರಿ ಎಂಬ ಹೆಸರಿನ ಆ ಆನೆಯು ನುಗ್ಗಿದ ರಭಸಕ್ಕೆ ಎದುರು ಬರುತ್ತಿದ್ದ ಬುದ್ಧನ ಸಂಘದ ಸದಸ್ಯರೆಲ್ಲ ಅತ್ತಿತ್ತ ಚದುರಿ ದೌಡಾಯಿಸಿ ಓಡಲಾರಂಭಿಸಿದರು. ಪ್ರಾಣಕ್ಕಂಜುವ ನೀವೆಂಥ ಬೋಧಿಸತ್ವರು ಎಂದು ಹೇಳಿ ಆತನೊಬ್ಬನೇ ಆನೆಯೆದುರು ನಿಲ್ಲುವುದೇ? ಯಾವುದೇ ಪ್ರಾಣಿ ನಾವು ಓಡಿಹೋದರೆ ಓಡಿಸಿಕೊಂಡು ಬರುವುದು, ನಾವು ಎದುರಿಗೆ ನಿಂತರೆ ಅದೇ ಹೆದರಿಕೊಂಡು ಓಡಿಹೋಗುವುದು ಎಂಬ ಸಂಗತಿಯನ್ನು ಕಾಡಿನ ವಾಸದ ಸಂದರ್ಭದಲ್ಲಿ ಅರಿತಿದ್ದನೆಂದು ಕಾಣುತ್ತದೆ. ಅದರ ಎದುರು ಕೈಯೆತ್ತಿ ನಿಂತ ಭಂಗಿಗೇ ಆ ಆನೆ ಈತ ತನ್ನನ್ನೇ ಮಣಿಸಬಲ್ಲಷ್ಟು ಶಕ್ತಿಶಾಲಿಯೇ ಇರಬೇಕು ಎಂದು ಬೆದರಿ, ಶರಣಾಗತಿಯೆಂಬಂತೆ ಮಂಡಿಯೂರಿತು. ಆತನನ್ನು ಕೊಲ್ಲಬೇಕೆಂಬ ನನ್ನ ಸಂಚು ಮಣ್ಣಾಯಿತು. ಬದಲಿಗೆ ಅವರೆಲ್ಲರ ಎದುರಿಗೆ ಆತ ಮತ್ತಷ್ಟು ಪರಾಕ್ರಮಿಯಾಗಿ ಹೋದ, ಮಹಾಪುರುಷನಾಗಿ ಹೋದ!

ಅಲ್ಲಿಂದ ಕಾಡಿನ ಮಾರ್ಗದಲ್ಲಿ ಮತ್ತೊಂದು ಊರಿಗೆ ಪ್ರಯಾಣ ಬೆಳೆಸುತ್ತಿದ್ದರು. ರಾಜಗೃಹದ ದಕ್ಷಿಣಕ್ಕೆ ಇದ್ದ ಭಾರೀ ಪರ್ವತ ಶ್ರೇಣಿಯನ್ನು ಅವರು ಹಾದು ಹೋಗಬೇಕಾಗಿತ್ತು. ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ಇವರು ಸಂಚರಿಸುವುದರ ಅರಿವಿತ್ತು ನನಗೆ. ಆ ಕಣಿವೆಯಲ್ಲಿ ಅನೇಕ ದರೋಡೆಕೋರರೂ ಇದ್ದರು. ಆ ಪರ್ವತಶ್ರೇಣಿಯ ತುದಿಯಲ್ಲಿ ಅನೇಕ ಬಂಡೆಗಲ್ಲುಗಳಿದ್ದವು. ಅವರ ಕೆಲಸವೇ ಪರ್ವತದ ಮೇಲಿಂದ ಬಂಡೆಗಲ್ಲುಗಳನ್ನೆಸೆದು ಕಿರಿದಾದ ಕಣಿವೆಯ ದಾರಿಹೋಕರನ್ನು ಗಾಸಿಗೊಳಿಸಿ ಅವರಿಂದ ನಗನಾಣ್ಯ ಅಪಹರಿಸುವುದಾಗಿತ್ತು.

ಅವರಿಗೆ ಹೇಳಿದೆ: ‘ಅವರ ಬಳಿ ನಗನಾಣ್ಯಗಳೇನಿಲ್ಲ. ಇರುವುದೊಂದೇ ಭಿಕ್ಷಾಪಾತ್ರೆ. ಹೆಚ್ಚೆಂದರೆ ತಿರಿದು ತಂದುದರಲ್ಲಿ ನಿಮಗೂ ಒಂದಿಷ್ಟು ನೀಡಬಹುದಷ್ಟೇ. ಆದರೆ ನಾನು ನಿಮಗೆ ಹಣ, ದವಸಧಾನ್ಯಗಳೆಲ್ಲವನ್ನೂ ಕೊಡುವೆ. ಪ್ರತಿಫಲವಾಗಿ ನೀವು ಮಾಡಬೇಕಾದುದಿಷ್ಟೇ. ಬಂಡೆಗಳನ್ನು ಮೇಲಿಂದ ಉದುರಿಸಿ ಅವನನ್ನು ಕೊಲ್ಲಬೇಕಷ್ಟೇ. ಒಂದು ವೇಳೆ ತಪ್ಪಿಸಿಕೊಂಡರೆ ಹೋಗಿ ಕತ್ತರಿಸಿ ಬರಬೇಕು...’ ಎಂದು. ಸರಿಯೆಂದರು. ನಾಣ್ಯಗಳನ್ನೂ ಪಡೆದರು.

ಬುದ್ಧನ ಸಾಂಘಿಕರು ಕಿರುಕಣಿವೆಯ ಹಾದಿಗುಂಟ ಹಾದು ಹೋಗುವಾಗ ಬಂಡೆಗಲ್ಲುಗಳನ್ನು ಬೀಳಿಸಿದರು. ಅನುಯಾಯಿಗಳೆಲ್ಲ ದಿಕ್ಕಾಪಾಲಾಗಿ

## ಕಳೆದ ಸಂಚಿಕೆಯಲ್ಲಿ



ಗೌತಮಿಯ ತಾಯಿಕರುಳು, ಯಶೋಧರೆಯ ಮೋಹ, ಪುಟ್ಟ ಕಂದಮ್ಮ ರಾಹುಲನ ನಗು, ಯಾವುದಕ್ಕೂ ಗೌತಮನನ್ನು ಅರಮನೆಯೊಳಗೆ ಉಳಿಸಿಕೊಳ್ಳುವ ಶಕ್ತಿಯಿರಲಿಲ್ಲ. ಬಯಲಿಗೆ ಬಂದ ಸಿದ್ಧಾರ್ಥನಿಗೆ ಹಸಿವೆಗೆ ಆಹಾರವನ್ನು ಹೊಂದಿಸಿಕೊಳ್ಳುವುದು ಹೇಗೆನ್ನುವುದೂ ತಿಳಿದಿರಲಿಲ್ಲ. ಎದುರಾದ ಮರಗಳ ಹಣ್ಣನ್ನು ತಿಂದು, ತೊರೆಗಳಲ್ಲಿನ ನೀರು ಕುಡಿದು ಹಸಿವು ತಣಿಸಿಕೊಳ್ಳತೊಡಗಿದ. ಅಲೆಮಾರಿಯನ್ನು ಕಂಡು ಖಿನ್ನನಾದ ಚಕ್ರವರ್ತಿ ಬಿಂಬಸಾರ ಅರಮನೆಗೆ ಹಿಂತಿರುಗುವಂತೆ ತಿಳಿ ಹೇಳಿದ್ದು ಫಲ ನೀಡಲಿಲ್ಲ. ತಂದೆ ತಾಯಿ ಪತ್ನಿ ಪರಿವಾರವನ್ನು ಕರೆಸಿದ್ದೂ ಉಪಯೋಗವಾಗಲಿಲ್ಲ. ಸಿದ್ಧಾರ್ಥನ ನಿರ್ಧಾರ ಅಚಲವಾಗಿತ್ತು. ದುಃಖದ ಮೂಲವನ್ನು ಹುಡುಕುತ್ತಾ ಕಠಿಣ ದೇಹದಂಡನೆಯಲ್ಲಿ ತೊಡಗಿದ. ಸಾವಿನಂಚಿಗೆ ತಲುಪಿದಾಗ ಯಾರೋ ಅನ್ನವುಣಿಸಿ, ಹಾಲುಣಿಸಿ ಜೀವವುಳಿಸಿದರು. ದೇಹದಂಡನೆ ತನ್ನನ್ನು ಬಹು ದೂರ ಕೊಂಡೊಯ್ಯಲಾರದೆನ್ನುವುದು ಸಿದ್ಧಾರ್ಥನಿಗೆ ಬಹು ಬೇಗ ಅರಿವಾಯಿತು. ಸಿದ್ಧಾರ್ಥನ ಕಠಿಣ ತಪಸ್ಸನ್ನು ನೋಡಿ ಶಿಷ್ಯರೆಂದು ಬಂದವರು, ಸ್ವಲ್ಪ ಸಮಯದಲ್ಲಿಯೇ ಅವನಿಂದ ತಾವಾಗಿ ದೂರವಾದರು. ಸಿದ್ಧಾರ್ಥನ ಅರಿವಿನ ಪಯಣ ಮುಂದುವರೆಯಿತು.